ರಾಜ್ಯ, ದೇಶವಿದೇಶಗಳಲ್ಲೂ ಎಂಥೆಂಥ ಪೋಸ್ಟ್ ಅಲಂಕರಿಸಿ, ಮನೆತನಕ್ಕೆ ಅಷ್ಟೇಯಲ್ಲ; ಊರಿಗೆ, ತಾಲೂಕಿಗೆ, ಜಿಲ್ಲೆಗೆ ಕೀರ್ತಿ ತಂದಿದ್ದಾರೆಂದರೆ ಹುಡುಗಾಟಿಕೆ ಮಾತೇ? ಆ ದೃಷ್ಟಿಯಿಂದ ವಂಶವೃಕ್ಷ ಇಲ್ಲವೆಂಬುದೇ ದೊಡ್ಡ ಲೋಪ. ಮುಂದಿನ ತಲೆಮಾರಿನವರಿಗಾದರೂ, ಕುಲದ ಹಿರಿಮೆ ತಿಳಿಯುವ ದಾಖಲಾತಿ ಅವಶ್ಯವಲ್ಲವೇ...' ಎಂದು ಬೆನ್ನುತಟ್ಟಿ ಹುರಿದುಂಬಿಸಿದ ಸುಬ್ಬಣ್ಣ.

'ಇಷ್ಟರೊಳಗೆ ಆಗಬೇಕಾಗಿತ್ತು. ಆದರೆ, ಅದನ್ನು ತಯಾರಿಸಲು ಎಲ್ಲರ ಕೈಯಲ್ಲಿ ಆಗದ ಮಾತು. ಅದಕ್ಕೂ ಒಂದು ಯೋಗ್ಯತೆ ಬೇಕು. ಅದಕ್ಕೇ ನೀನೇ ಸೈ...' ಎಂದು ವಗ್ಗರಣೆ ಹಾಕಿ, ಪುಸಲಾಯಿದ ಸಂಕ್ರಣ್ಣ. 'ನಮ್ಮ ಕುಟುಂಬದ ಬಹುಪರಾಕಿಗೆ, ಅದೊಂದು ಬಾಕಿಯಿತ್ತು' ನಂಜಿನ ಕಿಡಿಕಾರಿದ ಗುಂಡ. 'ಕೆಲಸವಿಲ್ಲದಾಚಾರಿ ಮಗನ ಕುಂಡೆ ಕೆತ್ತಿದ್ನಂತೆ..' ಗೇಲಿ ಮಾಡಿ ವಾಸು ನಕ್ಕರೆ, 'ವಂಶವೃಕ್ಷವಂತೆ.. ವಂಶವೃಕ್ಷ. ಅದನ್ನ ತಯಾರಿಸಿ ಉಪ್ಪಿನ ಕಾಯಿ ಹಾಕಿ ನೆಕ್ಕ ಬೇಕಷ್ಟೇ..'ಎಂದು ಛೇಡಿಸಿದ ಪರಮೇಶಿ. ಅವರವರ ಭಾವಕ್ಕೆ, ಅವರವರ ಮೂಗಿನ ನೇರಕ್ಕೆ ತಕ್ಕಂಥ ಮಾತು. ಏನೇಯಾಗಲಿ, ವಂಶವೃಕ್ಷ ತಯಾರಿಸುವುದೇ. ಬಹುಮತಕ್ಕೆ ತಲೆಬಾಗಿ, ಕಂಕಣ ಕಟ್ಟಿ ಸನ್ನದ್ಧನಾದೆ. ನಮ್ಮ ವಂಶವೃಕ್ಷಕ್ಕೆ ಇತಿಮಿತಿಗಳುಂಟೆಂದು ಊರು, ಪರಊರುಗಳಲ್ಲಿ ಹರಿದುಹಂಚಿ ಹೋಗಿರುವವರ ಮಾಹಿತಿ ಸಂಗ್ರಹಿಸುವಾಗ ಸ್ಪಷ್ಟವಾಗ ತೊಡಗಿತು. ಕೆಲವರು ಬುರಡೆ ಬಿಡುವ ಹಾಗೆ ದೇಶವಿದೇಶದ ಮಾತಿರಲಿ, ರಾಜ್ಯ ಜಿಲ್ಲಾ ಮಟ್ಟದಲ್ಲೂ ಹೆಸರು ಮಾಡಿದವರು ಯಾರೂ ಇಲ್ಲ. ಎಲ್ಲಾ ಒಣಪ್ರತಿಷ್ಠೆ. ಅಷ್ಟೇಯಲ್ಲ; ಶ್ರಾದ್ಧದಲ್ಲಿ ಜನಿವಾರ ಎಡಬಲ ಮಾಡಿ, ಪಿಂಡ ಹಾಕಿ, ತರ್ಪಣ ಬಿಡುವಾಗ ಪಿತ (ತಂದೆ), ಪಿತಾಮಹ (ಅಜ್ಜ), ಪ್ರಪಿತಾಮಹ (ಮುತ್ತಜ್ಜ) ಎಂದು ಮೂರು ತಲೆಮಾರ ಬಿಟ್ಟರೆ, ನಾಲ್ಕನೇ ತಲೆಮಾರಿನ ಪೂರ್ವಜರೊಬ್ಬರ ಹೆಸರು ಬಲ್ಲವರಿಲ್ಲವೆಂದ ಮೇಲೆ, ವಂಶವೃಕ್ಷ ದಾಖಲಿಸುವುದೆಂತು?

ಮಣ್ಣಾಂಗಟ್ಟಿ!

ಎಷ್ಟಾಯ್ತೋ ಅಷ್ಟು, ಮುಂದಿನ ತಲೆಮಾರಿನವರಿಗಾದರೂ, ಅನುಕೂಲ ವಾಗಲೆಂದು ವಂಶವೃಕ್ಷ ಪಟ್ಟಿಯಾದಿ ತಯಾರಿಸುತ್ತಿದ್ದಾಗ ಹೊಸ ಸಮಸ್ಯೆಯೊಂದು ಧುತ್ತನೆದುರಾಗಬೇಕೇ!?

'ಗೋತ್ರಸೂತಕ ಕಡಿದುಕೊಂಡು, ಕುಟುಂಬದಿಂದ ಹೊರಹೋದವರ ಹೆಸರ, ವಂಶವೃಕ್ಷಕ್ಕೆ ಸೇರಿಸಬೇಕೆ? ಬೇಡವೇ?'

'ಖಂಡಿತಾ ಕೂಡದು. ಅದರಲ್ಲೂ ಸ್ವಾರ್ಥ ಪ್ರತಿಷ್ಠೆಗೋಸ್ಕರ ಸ್ವಯಂ ಘೋಷಿತವಾಗಿ ಕುಟುಂಬದ ನಂಟು ಹರಿದುಕೊಂಡು, ನಿಷ್ಠೂರವಾಗಿ ಹೊರ ನಡೆದ ಕುಲಘಾತಕನ ಹೆಸರ ವಂಶವೃಕ್ಷದಲ್ಲಿ ಸೇರಿಸುವುದು ಧರ್ಮನ್ಯಾಯ ಸಮ್ಮತ ಅಲ್ಲವೇ ಅಲ್ಲ' ಎನ್ನುತ್ತ ಕಟ್ಟಿಸಿದಹಲ್ಲು ಕಟಕಟಿಸುತ್ತಲೇ ಕಟ್ಟಾಜ್ಞೆ ಹೊರಡಿಸಿದರು ಕುಟುಂಬದ ಹಿರಿಯ, ತೊಂಬತ್ತರ ನಾಗಜ್ಜ.

'ಹಾಗಲ್ಲ ನಾಗ್ರೂ, ಗೋತ್ರಸೂತಕ, ಕುಲಸಂಬಂಧ ಸ್ವತಃ ಹರಿದು ಕೊಂಡ್ರೆ, ಅಂಥ ತಲೆತಿರುಕರನ್ನ ವಂಶವೃಕ್ಷದಿಂದ ಕೈಬಿಡೋಕೆ ಹೇಗೆ ಸಾಧ್ಯನೋ? ಅದೇ ದತ್ತಕ್ಕೆ ಹೋದ್ರೆ ಬೇರೆ ಪ್ರಶ್ನೆ ನೋಡು!' ಅನಂತಯ್ಯನ ಸಮಜಾಯಿಷಿ. 'ಹಟಾಂದ್ರೆ ಅವ್ನಿಗೊಬ್ನಿಗೇ ಸೈಯಾ? ಅದಕ್ಕೊಂದು ಇತಿಮಿತಿ ಬ್ಯಾಡ್ವಾ? ಕುಲಗೋತ್ರ ಹರಿದುಕೊಳ್ಳೋದೂಂದ್ರೆ ಹುಡುಗಾಟಿಕ್ಯೇನಾ? ಕೈಗೆ ಬಳೆ ತೊಟ್ಟವರಲ್ಲ, ನಮ್ಗೂ ಹಟಾಯಿದೆ ಅಂತಾ, ಅವ್ನ ವಂಶವೃಕ್ಷಕ್ಕೆ ಸೇರಸ್ದೇ ಹೊರಹಾಕಿದ್ರಾಯ್ತಪ್ಪ..' ಕೂಸಪ್ಪನೋರ ವಗ್ಗರಣೆ!

'ಬಾಯಿಗೆ ಬಂದಂತೆ ಹರಟಬಾರದು. ಧರ್ಮಸೂಕ್ಷ್ಮದ ವಿಷಯವಿದು. ಮಠಕ್ಕೆ ಹೋಗಿ, ಮಹಾಸ್ವಾಮಿ ಸಾನ್ನಿಧ್ಯದಲ್ಲಿ ಅರಿಕೆ ಮಾಡಿಕೊಳ್ಳೋಣ. ಅವ್ರು ಹೇಗೆ ಅನುಗ್ರಹಿಸ್ತಾರೊ ಹಾಗೆ ನಡೆದುಕೊಳ್ಳೋಣ' ಶಂಕ್ರಯ್ಯನ ಸಲಹೆ ಸರ್ವಸಮ್ಮತವಾಗಿ, ಸದ್ಯದ ಸಂದಿಗ್ಧದಿಂದ ಬಚಾವಾದದ್ದು ಪುಣ್ಯವಿಶೇಷ!

ಗೋತ್ರ, ಸೂತಕ, ಸಂಬಂಧ ಹರಿದುಕೊಂಡು 'ಕುಲಘಾತಕ'ಬಿರುದಿಗೆ ಪಾತ್ರರಾದ ಮಹಾಶಯ ಸಸಿಹಕ್ಲು ಶೇಷಪ್ಪ. ತಾನೇರಿದ ಕುದುರೆಗೆ ಮೂರೇ ಕಾಲೆಂಬ ಹಟವಾದಿ ಮಾತ್ರವಲ್ಲ; ಛಲವಾದಿ. ಅದಕ್ಕೆ ಅವನಿಗೆ ಕುಲಘಾತಾಕ ಎಂಬ ಅಭಿದಾನ.

ಪಾಳು ಬಿದಿದ್ದ ಊರ ಈಶ್ವರ ದೇವಾಸ್ಥಾನ ಜೀರ್ಣೋದ್ಧಾರ ಮಾಡ ಬೇಕೆಂಬ ಛಲ ಇದ್ದಕ್ಕಿದಂತೆ ಹೊಳೆದಿದ್ದೇ ತಡ, ಶೇಷಪ್ಪ ಸೊಂಟ ಕಟ್ಟಿ ನಿಂತ.